# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂಃ 463/2018 ಸಿಡಬ್ಲೂ : 5 ಪಿಡಬ್ಲೂಃ 5

ಪ್ರಮಾಣವಚನ ಬೋಧಿಸಲಾಯಿತು ದಿಃ 28-01-2026

ಹೆಸರು : ವಿಠಲ್ ರೆಡ್ಡಿ

ತಂದೆ ಹೆಸರು : ಲಕ್ಷ್ಮನ್ ರೆಡ್ಡಿ

ವಯಸ್ಸು : 55 ವರ್ಷ

ಉದ್ಯೋಗ : ಮುಖ್ಯ ಪೇದೆ , ಚಿಂಚೋಳ್ಳಿ ಪಿ ಎಸ್

ವಾಸಸ್ಥಳ : ಸೇಡಂ

**: ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :**

ನಾನು ಸನ್ 2016 ರಿಂದ 2022 ಸೇಡಂ ಪಿ ಎಸ್ ನಲ್ಲಿ ಮುಖ್ಯಪೇದೆ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಈ ಅವಧಿಯಲ್ಲಿ ದಿಃ 06-04-2018 ರಂದು ನಾನು ಮಧ್ಯಾಹ್ನ ಹಾಜರಿಯಲ್ಲಿದ್ದಾಗ ಚಾ ಸಾ 1 ರವರು ನನ್ನನ್ನು ಹಾಗೂ ಚಾ ಸಾ 4, 6 ಮತ್ತು 7 ರವರಿಗೆ ಕರೆಯಿಸಿ ಸೇಡಂ ಪಟ್ಟಣದ ದೊಡ್ಡ ಅಗಸಿಯಲ್ಲಿ ಯಾರೋ ಒಬ್ಬ ವ್ಯಕ್ತಿ ಅಕ್ರಮವಾಗಿ ಸೇಂದಿ ಮಾರಾಟ ಮಾರುತ್ತಿದ್ದಾನೆ ಎಂದು ಬಾತಮಿ ಬಂದಿದೆ ಅದಕ್ಕೆ ದಾಳಿ ಮಾಡಲು ಹೋಗಬೇಕಾಗಿದೆ ಎಂದು ತಿಳಿಸಿದರು. ಆಗ ನಾನು , ಚಾ ಸಾ 1, 4, 6, 7 ಇಬ್ಬರು ಪಂಚರೊಂದಿಗೆ ಕಛೇರಿಯಿಂದ ಹೊರಟು ದೊಡ್ಡ ಅಗಸಿಗೆ ಹೋಗಿ ನೋಡಿದಾಟಗ ಆರೋಪಿತನು ಕೈ ಸನ್ನೆ ಮಾಡಿ ಸಾರ್ವಜನಿಕರಿಗೆ ಕೈಯಲ್ಲಿ ಸೇಂದಿ ಪಾಕೇಟನ್ನು ಹಿಡಿದು ಮಾರಾಟ ಮಾಡುತ್ತಿದ್ದು. ಆಗ ನಾವು ದಾಳಿ ಮಾಡಿದಾಗ ಅಲ್ಲಿ 25 ಸೇಂದಿ ಪಾಕೇಟುಗಳು ದೊರೆಯಿತು. ಹಾಗೂ ಇಬ್ಬರೂ ಹೆಣ್ಣು ಮಕ್ಕಳು ಅವರ ಹೆಸರು ಸಾಬಮ್ಮ ಮತ್ತು ಮಹಾದೇವಿಯವರಿಗೆ ಹಿಡಿದುಕೊಂಡು ವಶಕ್ಕೆ ಪಡೆದುಕೊಂಡಿದ್ದೆವು. ನಂತರ ಚಾ ಸಾ 1 ರವರು ಪರವಾನಗಿ ಬಗ್ಗೆ ಕಾಗದ ಪತ್ರಗಳನ್ನು ವಿಚಾರಣೆ ಮಾಡಿದಾಗ ಆರೋಪಿತರು ಯಾವುದೇ ಕಾಗದ ಪತ್ರಗಳು ಇಲ್ಲ ಎಂದು ತಿಳಿಸಿದರು. ನಂತರ ಸದರಿ ಸೇಂದಿಯಿಂದ 1 ಲೀ ಸೇಂದಿ ರಾಸಾಯನಿಕ ಪರೀಕ್ಷೆ ಕುರಿತು ಪ್ರತ್ಯೇಕವಾಗಿ ಜಪ್ತಿ ಪಡಿಸಿ ಸೀಲು ಹಾಕಲಾಯಿತು. ಸದರಿ ಪಂಚನಾಮೆ ಮಧ್ಯಾಹ್ನ 03-00 ರಿಂದ 04-00 ಗಂಟೆಯವರೆಗೆ ಗುನ್ನೆ ಸ್ಥಳದಲ್ಲಿ ಕುಳಿತು ಬರೆದು ಮುಗಿಸಲಾಯಿತು. ಸಾಕ್ಷಿಯು ಒಂದು ಖಾಲಿ ಬಾಟಲಿಯನ್ನು ನೋಡಿ ಗುರುತಿಸಿರುತ್ತಾರೆ ಅದನ್ನು ಈಗಾಗಲೆ ಮೂ ಮಾ 1 ಎಂದು ಗುರುತಿಸಲಾಗಿದೆ.

**ಪಾಟೀಸವಾಲುಃ** ಆರೋಪಿ ಪರ ಶ್ರೀ ಎ ಎಂ ವಕೀಲರಿಂದಃ

ದಿಃ 06-04-2018 ರಂದು ನಾನು ಮಧ್ಯಾಹ್ನ ಹಾಜರಿಯಲ್ಲಿದ್ದಾಗ ಚಾ ಸಾ 1 ರವರು ನನ್ನನ್ನು ಹಾಗೂ ಚಾ ಸಾ 4, 6 ಮತ್ತು 7 ರವರಿಗೆ ಕರೆಯಿಸಿ ಸೇಡಂ ಪಟ್ಟಣದ ದೊಡ್ಡ ಅಗಸಿಯಲ್ಲಿ ಯಾರೋ ಒಬ್ಬ ವ್ಯಕ್ತಿ ಅಕ್ರಮವಾಗಿ ಸೇಂದಿ ಮಾರಾಟ ಮಾರುತ್ತಿದ್ದಾನೆ ಎಂದು ಬಾತಮಿ ಬಂದಿದೆ ಅದಕ್ಕೆ ದಾಳಿ ಮಾಡಲು ಹೋಗಬೇಕಾಗಿದೆ ಎಂದು ತಿಳಿಸಿದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಆಗ ನಾನು , ಚಾ ಸಾ 1, 4, 6, 7 ಇಬ್ಬರು ಪಂಚರೊಂದಿಗೆ ಕಛೇರಿಯಿಂದ ಹೋರಟು ದೊಡ್ಡ ಅಗಸಿಗೆ ಹೋಗಿ ನೋಡಿದಾಟಗ ಆರೋಪಿತನು ಕೈ ಸನ್ನೆ ಮಾಡಿ ಸಾರ್ವಜನಿಕರಿಗೆ ಕೈಯಲ್ಲಿ ಸೇಂದಿ ಪಾಕೇಟನ್ನು ಹಿಡಿದು ಮಾರಾಟ ಮಾಡುತ್ತಿದ್ದು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಆಗ ನಾವು ದಾಳಿ ಮಾಡಿದಾಗ ಅಲ್ಲಿ 25 ಸೇಂದಿ ಪಾಕೇಟುಗಳು ದೊರೆಯಿತು. ಹಾಗೂ ಇಬ್ಬರೂ ಹೆಣ್ಣು ಮಕ್ಕಳು ಅವರ ಹೆಸರು ಸಾಬಮ್ಮ ಮತ್ತು ಮಹಾದೇವಿಯವರಿಗೆ ಹಿಡಿದುಕೊಂಡು ವಶಕ್ಕೆ ಪಡೆದುಕೊಂಡಿದ್ದೆವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ಚಾ ಸಾ 1 ರವರು ಪರವಾನಗಿ ಬಗ್ಗೆ ಕಾಗದ ಪತ್ರಗಳನ್ನು ವಿಚಾರಣೆ ಮಾಡಿದಾಗ ಆರೋಪಿತರು ಯಾವುದೇ ಕಾಗದ ಪತ್ರಗಳು ಇಲ್ಲ ಎಂದು ತಿಳಿಸಿದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ಸದರಿ ಸೇಂದಿಯಿಂದ 1 ಲೀ ಸೇಂದಿ ರಾಸಾಯನಿಕ ಪರೀಕ್ಷೆ ಕುರಿತು ಪ್ರತ್ಯೇಕವಾಗಿ ಜಪ್ತಿ ಪಡಿಸಿ ಸೀಲು ಹಾಕಲಾಯಿತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಸದರಿ ಪಂಚನಾಮೆ ಮಧ್ಯಾಹ್ನ 03-00 ರಿಂದ 04-00 ಗಂಟೆಯವರೆಗೆ ಗುನ್ನೆ ಸ್ಥಳದಲ್ಲಿ ಕುಳಿತು ಬರೆದು ಮುಗಿಸಲಾಯಿತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಮು ಮಾ ಗೂ ಆರೋಪಿತನಿಗೂ ಯಾವುದೇ ಸಂಬಂದ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಿಲ್ಲ. ಇಲಾಖೆಯ ಅಂಕಿ ಸಂಖ್ಯೆ ಗೋಸ್ಕರ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಿಲ್ಲ.

**(ಮರುವಿಚಾರಣೆ ಇಲ್ಲ)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿ ಇದೆ**

**ಪ್ರ. ದ. ನ್ಯಾ ದಂ. ಸೇಡಂ.**